1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಸಾಗರ.

ಸಿಸಿ ನಂ. 1536/2024

ಫಿರ್ಯಾದುದಾರರು- ಸಾಗರ ಟೌನ್ ಪೊಲೀಸರು.

ವಿರುದ್ಧ

ಆರೋಪಿತರು:- ಎ.1) ಮನೋಜ.

1 ನೇ ಆರೋಪಿಯ ಹೆಸರು:- ಮನೋಜ.

ತಂದೆಯ ಹೆಸರು:- ಚಂದ್ರಶೇಖರ ಎಂ.

ವಯಸ್ಸು:- ೨೩ ವರ್ಷ

ಉದ್ಯೋಗ:- ಡ್ರೈವರ್.

ವಾಸ: ಮಂಕೋಡು ಬಡಾವಣೆ,
ಗೋಪಾಲಗೌಡ ನಗರ,
ಸಾಗರ ಟೌನ್, ಶಿವಮೊಗ್ಗ.

ಭಾರತ ದಂಡ ಪ್ರಕ್ರಿಯ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ

ಪ್ರಶ್ನೆ 1- ನೀವು ಈ ಕೇಸಿನಲ್ಲಿ ಅಭಿಯೋಜನಾ ಪರ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ:-

ಪ್ರಶ್ನೆ: ೨- ಫ್ರಾಸಾ.1 ಶಿವಕುಮಾರ್, ಇವರು ತಮ್ಮ ಸಾಕ್ಷದಲ್ಲಿ, ಅಪಘಾತದ ವಿಚಾರವನ್ನು ನನ್ನ ತಮ್ಮ ಚಾಸಾ ೨ ಫೋನ್ ಮಾಡಿ ತಿಳಿಸಿದ್ದು, ಅಪಘಾತದಲ್ಲಿ ಗಾಯಗೊಂಡ ನನ್ನ ತಮ್ಮ ದಿವಾಕರ್ ರವರನ್ನು ಚಾಸಾ ೨ ರವರೇ ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನನ್ನ ತಮ್ಮ ದಿವಾಕರ್ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ಕೆಎ-15-ಎಕ್ಸ್ -5407 ಮೋಟಾರ್ ಸೈಕಲ್ ಗೆ ಇನ್ನೊಂದು ಮೋಟಾರ್ ಸೈಕಲ್ ಬಂದು ಡಿಕ್ಕಿ ಹೊಡೆದಿರುವುದಾಗಿ, ಸದರಿ ಅಪಘಾತವು ಮನೋಜ್ ಎಂಬ ವ್ಯಕ್ತಿ ತನ್ನ ಕೆಟಿಎಂ ಮೋಟಾರ್ ಸೈಕಲ್ ನ್ನು

ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಆಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ: 3- ಪ್ರಾಸಾ.1 ಶಿವಕುಮಾರ್, ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ತಮ್ಮ ದಿವಾಕರ್ ತಲೆ ಭಾಗದಲ್ಲಿ ಮತ್ತು ಕಣ್ಣಿಗೆ ಪೆಟ್ಟಾಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ನಾರಾಯಣ ಹೃದಯಾಲಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು, ಅಪಘಾತವು ದಿ: 02.08.2021 ರಂದು ಆಗಿತ್ತು, ನಾನು ಮರು ದಿವಸ ಅಂದರೆ ದಿ:03.08.2021 ರಂದು ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ನನ್ನ ತಮ್ಮನ ಜೊತೆ ಯೋಗಕ್ಷೇಮವನ್ನು ನೋಡಿಕೊಳ್ಳಲು ಅಲ್ಲಿಯೇ ಇದ್ದೆ ಮರುದಿವಸ ಬಂದು ದೂರು ಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ: 4- ಪ್ರಾಸಾ.1 ಶಿವಕುಮಾರ್, ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ನನ್ನ ತಮ್ಮ ದಿವಾಕರ್ ಅಮೆಜಾನ್ ಕಂಪನಿಯಲ್ಲಿ ಕೋರಿಯರ್ ಬಾಯ್ ಆಗಿ ಕೆಲಸ ಮಾಡುತ್ತಿದ್ದ, ತಾನು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿನ ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದ್ದು, ಆ ದಿವಸ ಅಪಘಾತ ಮಾಡಿದ ವ್ಯಕ್ತಿಯನ್ನು ನೋಡಿದರೆ ನಾನು ಗುರುತಿಸುವುದಾಗಿ, ಈ ದಿವಸ ಆರೋಪಿತ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು, ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರ ವಕೀಲರು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 317 ರಡಿಯಲ್ಲಿ ಸಲ್ಲಿಸಿರುತ್ತಾರೆ ಆದ್ದರಿಂದ ಆರೋಪಿಯನ್ನು ಗುರುತಿಸಿರುತ್ತಾರೆಂದು ತೆಗೆದುಕೊಳ್ಳಲಾಯಿತು, ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಶಾನೆ ಪಿ 14 ಎಂದು, ಅದರಲ್ಲಿನ ತನ್ನ

ಸಹಿಯನ್ನು ನಿಶಾನೆ ಪಿ 14(ಎ) ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 5- ಪ್ರಾಸಾ.4 ಅಜಯ್, ಇವರು ತಮ್ಮ ಸಾಕ್ಷದಲ್ಲಿ ನಿಪಿ-4 ರಲ್ಲಿರುವ ತನ್ನ ಸಹಿಯನ್ನು ತಾನು ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಗಿದ್ದು, ಬೆಃ 10.00 ಗಂಟೆಯಿಂದ 11 ಗಂಟೆಯವರೆಗೆ ಸೊರಬ ರಸ್ತೆಯ ಸಿಗಂದೂರು ಬಾರ್ ಅಂಡ್ ರೆಸ್ಟೋರೆಂಟ್ ಬಳಿ 2 ಬೈಕಿಗೆ ಅಪಘಾತ ವಾದ ಹಿನ್ನಲೆಯಲ್ಲಿ ಮಹಜರ್ ಅನ್ನು ಮಾಡಿರುವುದಾಗಿ, ನನ್ನೊಂದಿಗೆ ಚಾಸಾ-4 ರವರು ಇದ್ದರು, ಮಹಜರ್ ಕಾಲದಲ್ಲಿ ತೆಗೆದಂತಹ 2 ಪೋಟೋಗಳು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು, ಅದಕ್ಕೆ ಸಂಬಂದಪಟ್ಟ ಸಿಡಿಯನ್ನು ನಿಪಿ-8 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 6- ಪ್ರಾಸಾ.4 ಅಜಯ್, ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ತನಗೆ ನಿಪಿ-5 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೆರೆಗೆ ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಗಿದ್ದು, ನಿಪಿ-5 ಕ್ಕೆ ನನ್ನ ಜೊತೆ ಚಾಸಾ-4 ರವರು ಸಹಿ ಹಾಕಿರುತ್ತಾರೆ, ನಿಪಿ-5 ಅನ್ನು ಸಾಗರದ ಪೇಟೆ ಪೋಲೀಸ್ ಠಾಣೆಯಲ್ಲಿ ಮಾಡಿರುವುದಾಗಿ, ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ, ಆ ಸಂದರ್ಬದಲ್ಲಿ ತೆಗೆದ ಪೋಟೋ ಎಂದು ತಾನು ನುಡಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 13 ಎಂದು ಗುರುತಿಸಿರುವುದಾಗಿ, ನಿಪಿ-5 ರಡಿಯಲ್ಲಿ ಬೈಕುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 7- ಫ್ರಾಸಾಂ5 ರಮೇಶ್, ಇವರು ತಮ್ಮ ಸಾಕ್ಷದಲ್ಲಿ ಮೃತ ದಿವಾಕರ್ ನನ್ನ ದೊಡ್ಡಪ್ಪನ ಮಗ, 4 ವರ್ಷಗಳ ಹಿಂದೆ ಟೀಚರ್ಸ್ ಕಾಲೋನಿಗೆ ತಮ್ಮ ದ್ವಿಚಕ್ರವಾನದಲ್ಲಿ ಹೋಗುತ್ತಿದ್ದಾಗ ಮೃತ ದಿವಾಕರ್ ಅವರಿಗೆ ಅಪಘಾತ ಆಗಿರುತ್ತದೆ ಎಂದು ನಮ್ಮ ಸಂಬಂಧಿಕರು ಹೇಳಿರುವುದಾಗಿ, ಸಿಂಗದೂರು ರಸ್ತೆಯ ಬಾರ್ ಅಂಡ್ ರೆಸ್ಟೋರಂಟ್ ಹತ್ತಿರ ಅಪಘಾತ ಆಗಿರುತ್ತದೆ ತಲೆಗೆ ಪೆಟ್ಟು ಬಿದ್ದು ಶಿವಮೊಗ್ಗದ ನಾರಾಯಣ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ, 15 ದಿನಗಳ ನಂತರ ಚಿಕಿತ್ಸೆ ಫಲಿಸದೆ ಮೃತಪಟ್ಟಿರುತ್ತಾರೆ, ನ್ಯಾಯಾಲಯದ ಮುಂದಿರುವಂತ ಆರೋಪಿಯನ್ನು ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದು ನುಡಿದಿದ್ದು, ನಿಪಿ-1(ಎ) ನನ್ನ ಸಹಿ, ನಿಪಿ- 1 ಅನ್ನು ನಾನು ಪೊಲೀಸರ ಮುಂದೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 8- ಫ್ರಾಸಾಂ6 ಟಿ.ಡಿ. ಸಾಗರ್ ಕರ್, ಇವರು ತಮ್ಮ ಸಾಕ್ಷದಲ್ಲಿ ಸದರಿ ಕೇಸಿನ ಕಡತವನ್ನು ಚಾಸಾ-18 ರವರಿಂದ ಪಡೆದಿರುವುದಾಗಿ, ದಿಃ 17.08.2021 ರಂದು ಬೆಳಗ್ಗೆ 11.45 ಗಂಟೆಗೆ ಚಾಸಾ-6 ರವರು ಬಂದು ನೀಡಿದ ಹೇಳಿಕೆಯ ಆಧಾರದ ಮೇಲೆ 304(ಎ) ಅಳವಡಿಸಲು ನ್ಯಾಯಾಲಯಕ್ಕೆ ಕೋರಿಕೊಂಡಿರುವುದಾಗಿ, ಮುಂದಿನ ತನಿಖೆಗಾಗಿ ಚಾಸಾ-21 ಕಡತವನ್ನು ಹಸ್ತಾಂತರಿಸಿರುವುದಾಗಿ, ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ ವರದಿಯನ್ನು ತಾನು ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು, ತಾನು ನಿಪಿ-1 ಅನ್ನು ನೋಡಿ ಗುರುತಿಸಿದ್ದು ಚಾಸಾ-6 ರವರು ನೀಡಿದಂತ ಹೇಳಿಕೆ ಎಂದು ಗುರುತಿಸಿರುವುದಾಗಿ, ನಿಪಿ-1 ರಲ್ಲಿರುವ ತನ್ನ ಸಹಿಯನ್ನು ತಾನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 (ಬಿ) ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 9- ಫ್ರಾಸಾಂ7 ಪ್ರಜ್ವಲ್ ಎಂ., ಇವರು ತಮ್ಮ ಸಾಕ್ಷದಲ್ಲಿ ದಿಃ 02.08.2021 ರಂದು ನಾನು ನನ್ನ ಕೆಲಸದ ಮೇರೆಗೆ ಲಿಂಗದಹಳ್ಳಿಗೆ ಬೈಕಿನಲ್ಲಿ ಹೋಗುತ್ತಿದ್ದಾಗ, ದಿವಾಕರ್ ರವರು ಸೊರಬದಿಂದ ಸಾಗರದ ಕಡೆಗೆ ಬೈಕ್ ನಲ್ಲಿ ಬರುತ್ತಿದ್ದಾಗ

ಎದುರುಗಡೆಯಿಂದ ಆರೋಪಿ ಅತಿವೇಗ ಹಾಗು ಅಜಾಗರೂಕತೆಯಿಂದ ಬಂದು ಸಿಗಂದೂರು ಬಾರ್ ಅಂಡ್ ರೆಸ್ಟೋರೆಂಟ್ ಮುಂದೆ ದಿವಾಕರ್ ರವರ ಬೈಕಕಿಗೆ ಡಿಕ್ಕಿಪಡಿಸಿದ್ದು, ದಿವಾಕರ್ ರವರಿಗೆ ಕಣ್ಣು ಮತ್ತು ತಲೆಗೆ ಪೆಟ್ಟಾಗಿರುತ್ತದೆ, ದಿವಾಕರ್ ರವರು ಪ್ರಜ್ಞಾಹೀನರಾಗಿದ್ದರು, ಮದ್ಯಾಹ್ನ 1 ರಿಂದ 1.15 ಸಮಯ ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 10- ಫ್ರಾಸಾ.7 ಪ್ರಜ್ವಲ್ ಎಂ., ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಅಪಘಾತ ಪಡಿಸಿದ ಆರೋಪಿಯ ವಾಹನ ಕೆ ಟಿ ಎಂ ಬೈಕ್ ನಂಬರ್ ಕೆಎ 04 ಹೆಚ್ ಡಬ್ಲ್ಯೂ 2466. ಅಪಘಾತಕ್ಕೊಳಗಾದ ವಾಹನ ಸ್ಪೆಂಡರ್ ಮೋಟಾರ್ ಸೈಕಲ್ ಆರೋಪಿಯ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ, ನಾನು ಆಟೋ ತರಿಸಿ ಸರ್ಕಾರಿ ಆಸ್ಪತ್ರೆಗೆ ಕುಳುಹಿಸಿರುವುದಾಗಿ, ಅವರ ಅಣ್ಣನಾದ ಚಾಸಾ-1 ರವರಿಗೆ ಫೋನ್ ಮುಖಾಂತರ ತಿಳಿಸಿರುತ್ತೇನೆ, ಅಲ್ಲಿಂದ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿರುತ್ತಾರೆ, ಶಿವಮೊಗ್ಗದ ನಾರಾಯಣ ಹೃದಯಾಲಯದಲ್ಲಿ ಅವರು ಚಿಕಿತ್ಸೆ ಪಡೆದುಕೊಂಡಿರುತ್ತಾರೆ, ಐ ಸಿ ಯು ನಲ್ಲಿ ಅವರು 10 ದಿನಗಳ ನಂತರ ಮರಣ ಹೊಂದಿರುತ್ತಾರೆ, ನ್ಯಾಯಾಲಯದ ಮುಂದಿರುವಂತಹ ಆರೋಪಿಯನ್ನು ತಾನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 11- ಫ್ರಾಸಾ.7 ಪ್ರಜ್ವಲ್ ಎಂ., ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಅಪಘಾತಕ್ಕೀಡಾದ ಹಾಗೂ ಅಪಘಾತಪಡಿಸಿದ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ, ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ ಘಟನಾ ಸ್ಥಳದಲ್ಲಿ ಪಂಚನಾಮಯನ್ನು ಮಾಡಿರುತ್ತಾರೆ, ನಿಪಿ-4 ರಲ್ಲಿರುವ ತನ್ನ ಸಹಿಯನ್ನು ತಾನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-4(ಸಿ) ಎಂದು ಗುರುತಿಸಲಾಗಿದ್ದು, ತನಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ತಾನು ನೋಡಿ ಗುರುತಿಸಿದ ಮೇರೆಗೆ ಸದರಿ ಕಚ್ಚಾ ನಕಾಶೆಯನ್ನು ನಿಶಾನೆ ಪಿ 16

ಎಂದು, ಅದರಲ್ಲಿ ಇರುವ ತನ್ನ ಸಹಿಯನ್ನು ನಿಶಾನೆ ಪಿ-16(ಎ) ಎಂದು ಗುರುತಿಸಲಾಗಿದ್ದು, ನಿಪಿ-5 ರಲ್ಲಿರುವ ತನ್ನ ಸಹಿಯನ್ನು ತಾನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಗಿದ್ದು, ನಿಪಿ-5 ಅನ್ನು ಪೋಲೀಸ್ ಠಾಣೆಯಲ್ಲಿ ಜರುಗಿಸಿರುವುದಾಗಿ, ನಿಪಿ-6, 7 ಮತ್ತು 9 ರಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 12- ಫ್ರಾಸಾ.8 ಅಶೋಕ್ ಕುಮಾರ್., ಇವರು ತಮ್ಮ ಸಾಕ್ಷದಲ್ಲಿ ದಿಃ19.08.2021 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರ ವಿಚಾರಣೆ ಮಾಡಿರುವುದಾಗಿ, ಅದೇ ದಿನ ಐಎಂ ವಿ ವರದಿಯನ್ನು ಪಡೆದಿರುತ್ತೇನೆ, ದಿಃ16.09.2021 ರಂದು ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಮೃತರ ಹೆಂಡತಿಗೆ ಬಿಡುಗಡೆ ಮಾಡಿರುತ್ತೇವೆ ಮತ್ತು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ, ದಿಃ17.09.2021 ರಂದು ಪಿಎಂ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ, ಆರೋಪಿಯ ವಿರುದ್ಧ ಆರೋಪ ಸಾಬೀತಾ ಹಿನ್ನೆಲೆಯಲ್ಲಿ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಅದನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆಃ 13- ಫ್ರಾಸಾ.8 ಅಶೋಕ್ ಕುಮಾರ್., ಇವರು ತಮ್ಮ ಸಾಕ್ಷದಲ್ಲಿ ಮುಂದುವರೆದು ತನಗೆ ಐಎಂ ವಿ ವರದಿಯನ್ನು ತೋರಿಸಲಾಗಿ ತಾನು ನೋಡಿ ಅದನ್ನು ಗುರುತಿಸಿದ್ದು ಸದರಿ ಐ ಎಂ ವಿ ವರದಿಯನ್ನು ನಿಪಿ-17 ಎಂದು, ಶವಾ ತನಿಖಾ ವರದಿಯನ್ನು ನಿಪಿ- 18 ಎಂದು, ಪಿ.ಎಂ. ವರದಿಯನ್ನು ನಿಪಿ-19 ಎಂದು, ಇಂಡೆಮಿನಿಟಿ ಬಾಂಡ್ ಅನ್ನು ತಾನು ನೋಡಿ ಗುರುತಿಸಿದ್ದು, ಅದನ್ನು ನಿಪಿ-20

ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ-

ಪ್ರಶ್ನೆ 14- ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?
ಉತ್ತರಃ-

ಪ್ರಶ್ನೆ 15- ನೀವು ಯಾರನ್ನಾದರೂ ಸಾಕ್ಷಿ ವಿಚಾರಣೆ ಮಾಡಿಸುವಿರಾ?
ಉತ್ತರಃ-

ಪ್ರಶ್ನೆ 16- ನೀವು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸುವಿರಾ?
ಉತ್ತರಃ-

**(**ದಿನಾಂಕಃ19.01.2026 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ**)**

**(ದೀಪ ಕೆ.ಆರ್.)**
1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.